

# ಎಂಥಾ ನಖ-ರಾ!



ಗಿನ್ನಿಸ್ ದಾಖಲೆ ಮಾಡಲು ಜನ ಎಂತಹ ಹುಚ್ಚು ಸಾಹಸಕ್ಕೂ ರೆಡಿ! ಇಲ್ಲೊಬ್ಬಳು ತನ್ನ ಕೈಬೆರಳಿನ ಉಗುರುಗಳನ್ನೇ ಗಿನ್ನಿಸ್ ದಾಖಲೆಗಾಗಿ ಮುಡುಪಾಗಿಟ್ಟಿದ್ದಾಳೆ. ಈಕೆ ಅಮೆರಿಕದ ಲಾಸ್ ವೇಗಾಸ್‌ನ ಕ್ರಿಸ್ಟೀನ್ ವಾಲ್ಟನ್.

ಅತೀ ಉದ್ದನೆಯ ಉಗುರು ಹೊಂದಿದವಳೆಂಬ ಗಿನ್ನಿಸ್ ವಿಶ್ವ ದಾಖಲೆಯ ಹೆಗ್ಗಳಿಕೆ ಈಕೆಯದು. 45 ವರ್ಷದ ಈ ಮಹಿಳೆ ಕಳೆದ 22 ವರ್ಷಗಳಿಂದ ಬೆಳೆಸಿಕೊಂಡಿರುವ ಉಗುರನ್ನು ಕಂಡರೆ ನೀವು ಬೆರಗಾಗುವುದು ಖಂಡಿತ. ಈಕೆಯ ಎಡಗೈಯ ಎಲ್ಲ ಬೆರಳುಗಳ ಉಗುರುಗಳ 10 ಅಡಿ 2 ಇಂಚು (308.8 ಸೆಂ.ಮೀ) ಉದ್ದವಿದ್ದರೆ, ಬಲಗೈ ಬೆರಳುಗಳ ಉಗುರುಗಳು 9 ಅಡಿ 7 ಇಂಚು (292.1 ಸೆಂ. ಮೀ.) ಉದ್ದವಿದೆ! ಒಟ್ಟು 20 ಅಡಿ 5 ಇಂಚು!

ಇದುವರೆಗೂ ಅತೀ ಉದ್ದನೆಯ ಕೈ ಉಗುರುಗಳನ್ನು ಹೊಂದಿದ ಗಿನ್ನಿಸ್ ದಾಖಲೆಯು ಲೀ ರೆಡ್ಮಂಡ್ ಎನ್ನುವವಳ ಹೆಸರಿನಲ್ಲಿತ್ತು. ಅವಳ ಉಗುರುಗಳ ಒಟ್ಟು ಉದ್ದ 28 ಅಡಿ 4.5 ಇಂಚು ಇತ್ತು! ಆದರೆ ಆಕೆ ಇತ್ತೀಚೆಗೆ ಕಾರು ಅಪಘಾತದಲ್ಲಿ ಉಗುರುಗಳನ್ನು ಕಳೆದುಕೊಂಡಿದ್ದರಿಂದ ಈಗ ದಾಖಲೆಯ ಖ್ಯಾತಿ ಕ್ರಿಸ್ಟೀನ್ ಪಾಲಾಗಿದೆ.

ಮರದ ಕೊಂಬೆಗಳಂತೆ ಹರಡಿರುವ ಈ ಉಗುರುಗಳಿಂದ ಕ್ರಿಸ್ಟೀನ್‌ಗೆ ದಿನನಿತ್ಯದ ಕೆಲಸಗಳನ್ನು ಮಾಡಲು ತೊಂದರೆ ಆಗುವುದಿಲ್ಲವೆ? 'ಇಲ್ಲ' ಎನ್ನುತ್ತಾಳೆ ಈಕೆ! 'ಆದರೆ ಬೇರೆಯವರಂತೆ ಮೈಗೆ ಅಂಟಿಕೊಳ್ಳುವ ಬಣ್ಣ ಬಣ್ಣದ ಚೆಂದದ ಶರ್ಟ್‌ಗಳನ್ನು ಧರಿಸಲು ನನಗೆ ಆಗುತ್ತಿಲ್ಲ' ಎನ್ನುವುದಷ್ಟೆ ಈಕೆಯ ಬೇಜಾರು!

ಅಂದ ಹಾಗೆ, ಉಗುರನ್ನು ಉದ್ದವಾಗಿ ಬೆಳೆಸುವ ಆಲೋಚನೆ ಮೊದಲು ಈಕೆಗೆ ಇರಲಿಲ್ಲವಂತೆ. ಈ ದಾಖಲೆ ಮಾಡಲು ಈಕೆಯ ಮಕ್ಕಳೇ ಪ್ರೇರಣೆ ನೀಡಿದರಂತೆ!

■ ವಿದ್ಯಾ ವಿ ಹಾಲಭಾವಿ